'ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆ'ಯ ಪರಿಚಯ ಹಾಗೂ ಯೋಜನೆಯ ಅನುಷ್ಠಾನದಲ್ಲಿ ಸಹಕಾರ ಸಂಸ್ಥೆಗಳ ಪಾತ್ರ

– ಶ್ರೀ ರಘುನಂದನ ಕೆ, ಉಪಪ್ರಧಾನ ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು

ಇತ್ತೀಚಿನ ದಿನಮಾನದಲ್ಲಿ ಜನ ಸಾಮಾನ್ಯರು ಆರೋಗ್ಯ ಕಾರಣಗಳಿಗಾಗಿ ಹಾಗೂ ಹೆಚ್ಚುತ್ತಿರುವ ವೈದ್ಯಕೀಯ ವೆಚ್ಚಗಳಿಂದಾಗಿ ಸ್ವಸ್ಥ ಜೀವನ ನಡೆಸಲು ಕಷ್ಟಪಡುತ್ತಿರುವ ಸಂದರ್ಭದಲ್ಲಿ ಹಲವು ಆರೋಗ್ಯ ಯೋಜನೆಗಳನ್ನು ರೂಪಿಸಿ ಜಾರಿಗೆ ತರಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಶ್ರಮಿಸುತ್ತಿವೆ. ಇಂತಹ ಆರೋಗ್ಯ ಯೋಜನೆಗಳ ಆರಂಭಕ್ಕೆ ನಾಂದಿ ಹಾಡಿದ್ದು ಕರ್ನಾಟಕ ರಾಜ್ಯ. ಗ್ರಾಮೀಣ ಭಾಗದದಲ್ಲಿನ ರೈತರಲ್ಲಿ ಆರೋಗ್ಯ ರಕ್ಷಣೆಯ ಭರವಸೆಯನ್ನು ಮೂಡಿಸುವ ನಿಟ್ಟಿನಲ್ಲಿ, ರೈತರ ವೈದ್ಯಕೀಯ ವೆಚ್ಚವನ್ನು ತಾನು ಹಂಚಿಕೊಳ್ಳುವ ಮೂಲಕ ರೈತ ಕುಟುಂಬಗಳಿಗೆ ಆಸರೆಯಾಗುವ ಉದ್ದೇಶದಿಂದ 2003ರಲ್ಲಿ ಕರ್ನಾಟಕ ಸರ್ಕಾರ ದೇಶದ ಮೊಟ್ಟಮೊದಲ ಗ್ರಾಮೀಣ ಸಹಕಾರಿಗಳ ಆರೋಗ್ಯ ಯೋಜನೆಯಾದ "ಯಶಸ್ವಿನಿ ರೈತ ಆರೋಗ್ಯ ರಕ್ಷಣಾ ಯೋಜನೆ"ಯನ್ನು ಸಹಕಾರ ಇಲಾಖೆಯ ಮೂಲಕ ಜಾರಿಗೆ ತಂದಿತ್ತು. ಸದರಿ ಯೋಜನೆಯು 2017ರವರೆಗೆ ಯಶಸ್ವಿಯಾಗಿ ನಡೆದು ಬಡವರ ಪಾಲಿನ ಆರೋಗ್ಯ ಸಂಜೀವಿನಿ ಎಂದೇ ಪ್ರಸಿದ್ಧವಾಗಿತ್ತು. ಆದರೆ 2018 ರಲ್ಲಿ ರಾಜ್ಯದ ಎಲ್ಲರಿಗೂ ಸಾರ್ವತ್ರಿಕ ಆರೋಗ್ಯ ರಕ್ಷಣೆ ನೀಡಲು ಮುಂದಾದ ರಾಜ್ಯ ಸರ್ಕಾರ 'ಆರೋಗ್ಯ ಕರ್ನಾಟಕ ಯೋಜನೆ'ಯನ್ನು ಅನುಷ್ಠಾನಗೊಳಿಸಿದ ನಂತರ ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಯನ್ನು ಆರೋಗ್ಯ ಕರ್ನಾಟಕ ಯೋಜನೆಯಲ್ಲಿ ವಿಲೀನಗೊಳಿಸಿತ್ತು. 2016–17ನೇ ಸಾಲಿನಲ್ಲಿ 43 ಲಕ್ಷಕ್ಕೂ ಅಧಿಕ ಜನರು ಈ ಯೋಜನೆಯ ಸದಸ್ಯತ್ವ ಪಡೆದಿದ್ದು, 01.95 ಲಕ್ಷದಷ್ಟು ಶಸ್ತ್ರಚಿಕಿತ್ಸೆ ಹಾಗೂ 02.71 ಲಕ್ಷದಷ್ಟು ಹೊರರೋಗಿ ತಪಾಸಣೆಯ ವೆಚ್ಚ ಸೇರಿದಂತೆ 31,782 ಲಕ್ಷಗಳಷ್ಟು ವೆಚ್ಚವನ್ನು ಈ ಯೋಜನೆಯಡಿ ಭರಿಸಲಾಗಿತ್ತು.

ಯಶಸ್ವಿನಿ ಯೋಜನೆಯನ್ನು ಮರುಜಾರಿಗೊಳಿಸಬೇಕೆಂದು ಗ್ರಾಮೀಣ ಬಾಗದಲ್ಲಿನ ರೈತರು, ಸಹಕಾರಿ ಸಂಘಗಳು ಹಾಗೂ ಸಹಕಾರಿ ಸಂಘಗಳ ಸದಸ್ಯರು ನಿರಂತರವಾಗಿ ರಾಜ್ಯ ಸರ್ಕಾರದ ಗಮನ ಸೆಳೆದಿದ್ದವು. ಇದಕ್ಕೆ ಸ್ಪಂದಿಸಿದ ರಾಜ್ಯ ಸರ್ಕಾರ ಯಶಸ್ವಿನಿ ಯೋಜನೆಯನ್ನು ಮರುಜಾರಿಗೊಳಿಸಲು ತೀರ್ಮಾನಿಸಿ 2022–23ನೇ ಸಾಲಿನ ಅಯವ್ಯಯದಲ್ಲಿ 300 ಕೋಟಿ ಅವಕಾಶ ಕಲ್ಪಿಸಿತ್ತು. ಅದರಂತೆ ಪ್ರಸ್ತುತ, ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಯನ್ನು ಪರಿಷ್ಕರಿಸಿ ಸಹಕಾರ ಇಲಾಖೆಯ ಮೂಲಕ ಮರುಜಾರಿಗೊಳಿಸಿ ಅನುಷ್ಠಾನಗೊಳಿಸಲು ದಿನಾಂಕ:12.10.2022ರಂದು ರಾಜ್ಯ ಸರ್ಕಾರ ಆದೇಶಿಸಿದೆ. 01.01.2023 ರಿಂದ 31.12.2023 ರವರೆಗಿನ ಅವಧಿಗೆ ಯಶಸ್ವಿನಿ ಯೋಜನೆಯಡಿಯಲ್ಲಿ ನೋಂದಣಿ ಪ್ರಕ್ರಿಯೆಯು ದಿನಾಂಕ: 01.11.2022ರಿಂದ ಸಹಕಾರ ಸಂಘಗಳ ಮೂಲಕ ಪ್ರಾರಂಭವಾಗಲಿದೆ.

ಯೋಜನೆಯ ಹಿನ್ನೆಲೆ : ನಿರಂತರವಾಗಿ ಏರುತ್ತಿರುವ ವೈದ್ಯಕೀಯ ಸೌಲಭ್ಯಗಳಿಂದಾಗಿ ಗ್ರಾಮೀಣ ಭಾಗದ ರೈತ ಕುಟುಂಬಗಳು ತಮ್ಮ ಆರೋಗ್ಯ ರಕ್ಷಣೆಗಾಗಿ ಅಧಿಕ ಮೊತ್ತದ ಹಣವನ್ನು ವ್ಯಯಿಸುತ್ತಿರುವುದನ್ನು ಗಮನಿಸಿದ ಕರ್ನಾಟಕ ರಾಜ್ಯ ಸರ್ಕಾರ, ರೈತರ ಆರೋಗ್ಯ ರಕ್ಷಣೆಯ ಜವಾಬ್ದಾರಿಯಲ್ಲಿ ಸರ್ಕಾರ ಭಾಗವಹಿಸುವ ಯೋಜನೆಯೊಂದನ್ನು ರೂಪಿಸುವ ಪ್ರಯತ್ನ ನಡೆಸಿತು. ನಾರಾಯಣ ಹೃದಯಾಲಯದ ಸಂಸ್ಥಾಪಕರಾದ ಡಾ.ದೇವಿಪ್ರಸಾದ್ ಶೆಟ್ಟಿಯವರ ಪರಿಕಲ್ಪನೆಯೊಂದಿಗೆ, ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾಗಿದ್ದ ಶ್ರೀ ಎ ರಾಮಸ್ವಾಮಿ ಇವರ ಆಸಕ್ತಿ, ಪ್ರಯತ್ನಗಳ ಫಲವಾಗಿ ಯೋಜನೆಯೊಂದು ರೂಪಗೊಂಡಿತು. ಸರ್ಕಾರದ ಅನೇಕ ರೈತಪರ ಯೋಜನೆಗಳನ್ನು ಸಮಾಜಕ್ಕೆ ತಲುಪಿಸುತ್ತಿರುವ ಸಹಕಾರ ಸಂಸ್ಥೆಗಳ ಮೂಲಕ "ಯಶಸ್ವಿನಿ ಸಹಕಾರಿ ರೈತರ ಆರೋಗ್ಯ ರಕ್ಷಣಾ ಯೋಜನೆ" ಜಾರಿಗೆ ತರಲು ಉದ್ದೇಶಿಸಿ 14 ನವೆಂಬರ್ 2002ರಂದು ಕರ್ನಾಟಕ ರಾಜ್ಯದ ಅಂದಿನ ಮುಖ್ಯಮಂತ್ರಿಗಳಾದ ಶ್ರೀ ಎಸ್ ಎಂ ಕೃಷ್ಣ ಅವರಿಂದ ಈ ಯೋಜನೆ ಉದ್ಘಾಟಿಸಲ್ಪಟ್ಟು 01 ಜೂನ್ 2003 ರಿಂದ ಜಾರಿಗೆ ಬಂತು. ಸಹಕಾರ ಕ್ಷೇತ್ರದಲ್ಲಿನ ರೈತರ ಆರೋಗ್ಯದ ಕಾಳಜಿಯೊಂದಿಗೆ 'ರೈತರ ಆರೋಗ್ಯ ನಾಡಿನ ಭಾಗ್ಯ' ಎಂಬ ಘೋಷ ವಾಕ್ಯದೊಂದಿಗೆ ಪರಿಚಯಿಸಲ್ಪಟ್ಟ, ದೇಶದಲ್ಲೇ ಮಾದರಿಯಾದ ಸ್ವಯಂ ಹಣಕಾಸು ಪ್ರಾಯೋಜಕತ್ವದ ಯೋಜನೆ ಇದಾಗಿದೆ. 2017ರಲ್ಲಿ ಸ್ಥಗಿತವಾಗಿದ್ದ ಈ ಯೋಜನೆ ಬಹು ಬೇಡಿಕೆಯಿಂದಾಗಿ ಹಾಗೂ ಸಹಕಾರ ಮಂತ್ರಿಗಳಾದ ಶ್ರೀ ಎಸ್ ಟಿ ಸೋಮಶೇಖರ್‌ರವರ ಕಾಳಜಿಯ ಕಾರಣದಿಂದಾಗಿ ಮರುಜಾರಿಗೊಳ್ಳುತ್ತಿದೆ.

ಯೋಜನೆಯ ಅನುಷ್ಠಾನ : ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಯನ್ನು 'ಯಶಸ್ವಿನಿ ಸಹಕಾರಿ ರೈತರ ಆರೋಗ್ಯ ರಕ್ಷಣಾ ಟ್ರಸ್ಟ್' ಮೂಲಕ ನಡೆಸಲಾಗುತ್ತಿತ್ತು. ಈ ಯೋಜನೆಯಡಿಯಲ್ಲಿ ಆಸ್ಪತ್ರೆಗಳ ಸಂಪರ್ಕ ಜಾಲ ಸಿದ್ಧಪಡಿಸುವುದು, ಶಸ್ತ್ರಚಿಕಿತ್ಸೆಗಳ ವ್ಯಾಪ್ತಿಯನ್ನು ವಿಸ್ತರಿಸಲು ಪ್ರಯತ್ನಿಸುವುದು, ಆಸ್ಪತ್ರೆಗಳಿಗೆ ಮಾರ್ಗದರ್ಶಿ ಶಿಷ್ಟಾಚಾರಗಳನ್ನು ರಚಿಸಿ ಅದರ ಪಾಲನೆಯ ಬಗ್ಗೆ ಗಮನಹರಿಸುವುದು ಸೇರಿದಂತೆ ಯೋಜನೆಯ ಹಣಕಾಸು ನಿಧಿಯ ನಿರ್ವಹಣೆಯನ್ನು ಈ ಟ್ರಸ್ಟ್ ನಡೆಸುತ್ತಿತ್ತು. ಪ್ರಸ್ತುತ ಕೂಡ ಸಹಕಾರ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ 'ಯಶಸ್ವಿನಿ ಸಹಕಾರಿ ಸದಸ್ಯರ ಆರೋಗ್ಯ ರಕ್ಷಣಾ ಟ್ರಸ್ಟ್' ರಚಿಸಲಾಗಿದೆ. ಹಾಗೂ ಈ ಯೋಜನೆಯ ಅನುಷ್ಠಾನದ ಜವಾಬ್ದಾರಿಯನ್ನು ಸಹಕಾರ ಇಲಾಖೆಗೆ ನೀಡಲಾಗಿದೆ.

ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಯ ಪರಿಚಯ :

- ಗ್ರಾಮೀಣ ಸಹಕಾರ ಸಂಘಗಳ/ಸ್ವಸಹಾಯ ಗುಂಪುಗಳ ಗರಿಷ್ಠ ನಾಲ್ಕು ಸದಸ್ಯರ ಕುಟುಂಬಕ್ಕೆ ವಾರ್ಷಿಕ ರೂ.500/– ಮತ್ತು ಕುಟುಂಬದಲ್ಲಿ ನಾಲ್ಕಕ್ಕಿಂತ ಹೆಚ್ಚಿನ ಸದಸ್ಯರಿದ್ದಲ್ಲಿ ಪ್ರತೀ ಸದಸ್ಯನಿಗೆ ಹೆಚ್ಚುವರಿಯಾಗಿ ರೂ.100/– ವಂತಿಗೆ ಪಾವತಿಸಿ ನೋಂದಾಯಿಸಿಕೊಳ್ಳಬೇಕಾಗುತ್ತದೆ. ನಗರ ಸಹಕಾರ ಸಂಘಗಳ ಸದಸ್ಯರಿಗೆ ಸಂಬಂಧಿಸಿದಂತೆ ವಾರ್ಷಿಕ ವಂತಿಗೆ ರೂ.1000/– ಹಾಗೂ ನಾಲ್ಕಕ್ಕಿಂತ ಹೆಚ್ಚಿರುವ ಸದಸ್ಯನೊಬ್ಬನಿಗೆ ರೂ.200/– ವಂತಿಗೆ

ನಿಗದಿಪಡಿಸಲಾಗಿದೆ.

• ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಸದಸ್ಯರಿಗೆ ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪಯೋಜನೆಯಡಿ ಸಹಾಯಧನ ನೀಡುವ ಮೂಲಕ ಅವರ ವಾರ್ಷಿಕ ಸದಸ್ಯತ್ವದ ವಂತಿಗೆಯನ್ನು ಸರ್ಕಾರವೇ ಭರಿಸುತ್ತದೆ. ಸಹಕಾರಿ ಮೀನುಗಾರರು, ಸಹಕಾರಿ ಬೀಡಿ ಕಾರ್ಮಿಕರು ಮತ್ತು ಸಹಕಾರಿ ನೇಕಾರರು ಕೂಡ ಈ ಯೋಜನೆಯ ಸೌಲಭ್ಯ ಪಡೆಯಲು ಅರ್ಹರಿರುತ್ತಾರೆ.

• ಈ ಯೋಜನೆಯಡಿಯಲ್ಲಿ ಫಲಾನುಭವಿ ಕುಟುಂಬಕ್ಕೆ ವಾರ್ಷಿಕ ವೈದ್ಯಕೀಯ ಚಿಕಿತ್ಸಾ ವೆಚ್ಚದ ಗರಿಷ್ಠ ಮಿತಿಯನ್ನು ಐದು ಲಕ್ಷ ರೂಪಾಯಿಗಳೆಂದು ನಿಗದಿಪಡಿಸಿದೆ. ಯಶಸ್ವಿನಿ ಟ್ರಸ್ಟ್‌ನಿಂದ ಅಂಗೀಕೃತ ರಾಜ್ಯದ ಯಾವುದೇ ನೆಟ್‌ವರ್ಕ್ ಆಸ್ಪತ್ರೆಗಳಲ್ಲಿ ನಗದು ರಹಿತವಾಗಿ ಐದು ಲಕ್ಷದ ಮಿತಿಯಲ್ಲಿ ಚಿಕಿತ್ಸೆ ಪಡೆಯಲು ಅವಕಾಶವಿರುತ್ತದೆ. ಅಲ್ಲದೆ, ಹೊರರೋಗಿ ಚಿಕಿತ್ಸೆಗೆ ಮೂರು ತಿಂಗಳ ಅವಧಿಗೆ ಗರಿಷ್ಠ ರೂ.200/– ಮಿತಿ ನಿಗದಿಪಡಿಸಲಾಗಿದ್ದು, ಇದರಲ್ಲಿ ರೂ.100/–ನ್ನು ಯಶಸ್ವಿನಿ ಟ್ರಸ್ಟ್‌ನಿಂದ ಪಾವತಿಸಲಾಗುತ್ತದೆ.

• ಯೋಜನೆಯಲ್ಲಿ ಮೂಳೆ, ನೇತ್ರ, ಉದರ, ಕಿವಿ, ನರ, ಹೃದಯ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಯೋಜನೆಯಲ್ಲಿ ಅಳವಡಿಸಿಕೊಂಡಿರುವ ಸುಮಾರು 1650 ಖಾಯಿಲೆಗಳಿಗೆ ಚಿಕಿತ್ಸೆಯನ್ನು ಪ್ರಸ್ತುತ ಅಳವಡಿಸಿಕೊಳ್ಳಲಾಗಿದೆ.

ಸಹಕಾರಿಯ ಸದಸ್ಯರು ಈ ಯೋಜನೆಯ ಸೌಲಭ್ಯ ಪಡೆಯುವುದು ಹೇಗೆ? :

• ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ, 1959, ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997, ಬಹುರಾಜ್ಯ ಸಹಕಾರ ಸಂಘಗಳ ಕಾಯ್ದೆ 2002ರ ಅಡಿ ನೋಂದಾಯಿಸಿರುವ ಕಾರ್ಯನಿರತ ಸಹಕಾರ ಸಂಸ್ಥೆಯಲ್ಲಿ ಹಾಗೂ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ಹಾಗೂ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ವತಿಯಿಂದ ಸಂಘಟಿಸಲ್ಪಟ್ಟಿರುವ ಸ್ವ ಸಹಾಯ ಗುಂಪುಗಳ ಸದಸ್ಯರು ಹಾಗೂ ಸದಸ್ಯರ ಕುಟುಂಬದವರು ಈ ಯೋಜನೆಯ ಸೌಲಭ್ಯ ಪಡೆಯಲು ಅರ್ಹರಾಗುತ್ತಾರೆ.

• ಈ ಯೋಜನೆಯ ಸದಸ್ಯರಾಗಲು ವಯೋಮಿತಿಯ ನಿರ್ಬಂಧವಿರುವುದಿಲ್ಲ. ಸಹಕಾರ ಸಂಸ್ಥೆಯ ಸದಸ್ಯರಾಗಿ ಕನಿಷ್ಠ ಮೂರು ತಿಂಗಳಾಗಿರಬೇಕು. ಕುಟುಂಬದ ಎಲ್ಲ ಸದಸ್ಯರು ಸಹಕಾರ ಸಂಸ್ಥೆಯ ಸದಸ್ಯರಾಗಿರಬೇಕಿಲ್ಲ, ಕುಟುಂಬದ ಒಬ್ಬ ವ್ಯಕ್ತಿ ಸಹಕಾರ ಸಂಸ್ಥೆಯ ಸದಸ್ಯನಾಗಿದ್ದರೆ, ಕುಟುಂಬದ ಎಲ್ಲ ವ್ಯಕ್ತಿಗಳನ್ನು ಈ ಯೋಜನೆಯಡಿ ನೋಂದಾಯಿಸಬಹುದು.

• ಈ ಯೋಜನೆಯಡಿ ನೋಂದಾಯಿಸುವವರು ವಂತಿಗೆ ಹಣವನ್ನು, ಸದಸ್ಯತ್ವ ಪಡೆಯುತ್ತಿರುವವರ ಭಾವಚಿತ್ರ, ಕುಟುಂಬದ ಸದಸ್ಯರ ವಿವರಗಳನ್ನು ತಾವು ಸದಸ್ಯರಾಗಿರುವ ಸಹಕಾರ ಸಂಸ್ಥೆಗೆ ಒದಗಿಸಬೇಕಾಗುತ್ತದೆ, ನೋಂದಣಿಯಾದ ಬಗ್ಗೆ ಸಹಕಾರ ಸಂಸ್ಥೆಯಿಂದ ಯೂನಿಕ್ ಐಡಿ ಸಂಖ್ಯೆ ಹೊಂದಿರುವ ಕಾರ್ಡ್ ನೀಡಲಾಗುತ್ತದೆ.

• ಯಶಸ್ವಿನಿ ಯೋಜನೆ ಅನ್ವಯವಾಗುವ ನೆಟ್‌ವರ್ಕ್ ಆಸ್ಪತ್ರೆಗಳಲ್ಲಿ ಶಸ್ತ್ರ ಚಿಕಿತ್ಸೆಗಾಗಿ ಅಥವಾ ಹೊರ ರೋಗಿಯಾಗಿ ದಾಖಲಾಗುವ ಸಂದರ್ಭದಲ್ಲಿ ಯಶಸ್ವಿನಿ ಯೋಜನೆಯಡಿ ನೋಂದಣಿಯಾಗಿರುವ ಕಾರ್ಡ್‌ನ್ನು ಹಾಜರುಪಡಿಸುವ ಮೂಲಕ ನಗದು ರಹಿತ/ನಗದು ರಿಯಾಯಿತಿ ಚಿಕಿತ್ಸೆಯನ್ನು ಪಡೆಯಬಹುದು.

• ಸರ್ಕಾರಿ ನೌಕರರು, ಖಾಸಗಿ ಕಂಪನಿಯಲ್ಲಿ ಕಾರ್ಯನಿರ್ವಹಿಸುತ್ತಿರುವವರು ಅಥವಾ ಬೇರೆ ಯಾವುದೇ ಆರೋಗ್ಯ ವಿಮಾ ಯೋಜನೆಯ ಸೌಲಭ್ಯ ಹೊಂದಿರುವವರನ್ನು ಈ ಯೋಜನೆಯ ಫಲಾನುಭವಿಯಾಗಿ ನೋಂದಾಯಿಸಲು ಅವಕಾಶವಿರುವುದಿಲ್ಲ.

ಸಹಕಾರ ಸಂಸ್ಥೆಗಳು ಏನು ಮಾಡಬೇಕು? :

• ಸಹಕಾರ ಸಂಸ್ಥೆಗಳು ತಮ್ಮ ವ್ಯಾಪ್ತಿಯ ಸಹಕಾರ ಇಲಾಖೆಯ ಕಛೇರಿಯನ್ನು ಸಂಪರ್ಕಿಸಿ ಯಶಸ್ವಿನಿ ಯೋಜನೆಗೆ ಸದಸ್ಯರನ್ನು ನೋಂದಣಿ ಮಾಡಲು ಅಗತ್ಯವಾದ ಕಾರ್ಡ್/ಅರ್ಜಿ/ಪುಸ್ತಕಗಳನ್ನು ಪಡೆದುಕೊಳ್ಳಬೇಕು.

• ತಮ್ಮ ಸಂಸ್ಥೆಯಲ್ಲಿ ಸದಸ್ಯತ್ವ ಪಡೆದು ಮೂರು ತಿಂಗಳು ಕಳೆದಿರುವ ಸದಸ್ಯರು ಹಾಗೂ ಅವರ ಕುಟುಂಬದವರನ್ನು ಈ ಯೋಜನೆಗೆ ನಿಗದಿತ ವಂತಿಗೆ ಪಡೆಯುವ ಮೂಲಕ ನೋಂದಣಿ ಮಾಡಿಸಬೇಕು.

• ಸಾದಿಲ್ವಾರು ವೆಚ್ಚಕ್ಕಾಗಿ ಹಾಗೂ ಸದಸ್ಯರನ್ನು ನೋಂದಾಯಿಸಲು ಶ್ರಮಿಸಿದವರಿಗೆ ಪ್ರೋತ್ಸಾಹ ಧನವಾಗಿ ಹತ್ತು ರೂಪಾಯಿಗಳು ಸಹಕಾರ ಸಂಸ್ಥೆಗೆ ನೋಂದಣಿಯಾಗುವ ಪ್ರತಿ ಕುಟುಂಬದ ಕಾರ್ಡಿಗೆ ದೊರೆಯುತ್ತದೆ.

• ಸಹಕಾರ ಸಂಸ್ಥೆಗಳು ಹತ್ತು ರೂಪಾಯಿಗಳನ್ನು ಇಟ್ಟುಕೊಂಡು ಉಳಿದಂತೆ ಸಂಗ್ರಹವಾದ ವಂತಿಗೆ ಹಣವನ್ನು ಆಯಾ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನಲ್ಲಿರುವ ಯಶಸ್ವಿನಿ ಖಾತೆಗೆ ಹಣ ಸ್ವೀಕರಿಸಿದ 15 ದಿನಗಳೊಳಗಾಗಿ ಜಮಾ ಮಾಡಿ, ರಶೀದಿಯನ್ನು ಸಂಬಂಧಿಸಿದ ಸಹಕಾರ ಇಲಾಖೆಯ ಕಛೇರಿಗೆ ಸಲ್ಲಿಸಬೇಕು.

• ಈ ಯೋಜನೆಗೆ ನೋಂದಣಿಯ ಸಂದರ್ಭದಲ್ಲಿ, ಸಹಕಾರ ಇಲಾಖೆಯಿಂದ ಪಡೆದ ಅರ್ಜಿ ನಮೂನೆಯಲ್ಲಿ ಸದಸ್ಯರ ವಿವರಗಳನ್ನು ಭರ್ತಿ ಮಾಡಿಸಿ ಫೋಟೊ ಅಂಟಿಸಬೇಕು ಹಾಗೂ ಆಧಾರ ಸಂಖ್ಯೆಯನ್ನು ನಮೂದಿಸಬೇಕು. ಭರ್ತಿ ಮಾಡಿದ ಅರ್ಜಿಗಳನ್ನು ಸಹಕಾರ ಇಲಾಖೆಯ ಕಛೇರಿಗೆ ಕಳುಹಿಸಬೇಕು.

• ಪ್ರಸ್ತುತ ಸರ್ಕಾರ ಹೊರಡಿಸಿರುವ ಮಾರ್ಗಸೂಚಿಯು ಸಹಕಾರ ಇಲಾಖೆಯ ಸಹಕಾರ ಸಿಂಧು ವೆಬ್‌ಸೈಟಿನಲ್ಲಿ https://sahakarasindhu.karnataka.gov.in ನಲ್ಲಿ ಲಭ್ಯವಿದೆ. ಸದಸ್ಯರ ನೋಂದಣಿ ಮಾರ್ಗಸೂಚಿಗಳು, ನೆಟ್‌ವರ್ಕ್ ಆಸ್ಪತ್ರೆಗಳ ಪಟ್ಟಿ, ಶಸ್ತ್ರಚಿಕಿತ್ಸೆಗಳ ಪಟ್ಟಿ ಇವುಗಳ ಮಾಹಿತಿ ಇದೇ ವೆಬ್‌ಸೈಟ್‌ಗೆ ಅಪ್‌ಲೋಡ್ ಆಗಲಿದೆ.

ಸಮಾಜದ ಹಾಗೂ ಸಹಕಾರಿಯ ಸದಸ್ಯರ ಕುಟುಂಬದ ಆರೋಗ್ಯದ ದೃಷ್ಟಿಯಿಂದ ಸಹಕಾರ ಕ್ಷೇತ್ರವು ಸಾಮಾಜಿಕ ಬದ್ಧತೆಯ ಕಾರ್ಯಚಟುವಟಿಕೆಗಳಲ್ಲಿ ತೊಡಗಿಕೊಳ್ಳುವ ಅವಶ್ಯಕತೆಯಿದೆ. ಈ ಹಿಂದೆ ರಾಜ್ಯದ ಕೆಲವು ಸಹಕಾರ ಸಂಸ್ಥೆಗಳು ತಮ್ಮ ಸದಸ್ಯರ ಯಶಸ್ವಿನಿ ಯೋಜನೆಯ ವಂತಿಗೆಯಲ್ಲಿ ಭಾಗಶಃ ಹಣವನ್ನು ಸಂಸ್ಥೆಯಿಂದಲೇ ಭರಿಸುವ ಮೂಲಕ ಸದಸ್ಯರ ಆರೋಗ್ಯ ರಕ್ಷಣೆಯ ಕುರಿತು ತಮ್ಮ ಕಾಳಜಿಯನ್ನು ತೋರ್ಪಡಿಸಿದ ಉದಾಹರಣೆಗಳಿವೆ. ಸಹಕಾರಿಯ ಸದಸ್ಯರ ಹಾಗೂ ಸದಸ್ಯರ ಕುಟುಂಬದ ಆರೋಗ್ಯದ ದೃಷ್ಟಿಯಿಂದ ರಾಜ್ಯ ಸರ್ಕಾರದ ಮಾದರೀ ಹಾಗೂ ಜನಪ್ರಿಯ ಯೋಜನೆಯಾದ 'ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆ'ಯನ್ನು ಸಹಕಾರ ಸಂಸ್ಥೆಗಳು ತಮ್ಮ ಸದಸ್ಯರಿಗೆ ತಲುಪಿಸುವಲ್ಲಿ ಕಾರ್ಯೋನ್ಮುಖರಾಗುವ ಮೂಲಕ ಸ್ವಸ್ಥ ಸಮಾಜ ನಿರ್ಮಾಣದಲ್ಲಿ ಪಾಲ್ಗೊಳ್ಳಬೇಕಿದೆ.